ಓ ಎಸ್ ನಂ. 164/2020
ಡಿ ಡಬ್ಲ್ಯು 2
ದಿನಾಂಕ 21-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀ ಬಿ ಎಂ ಪಿ ವಕೀಲರಿಂದಃ

ನಾನು ಬಿಲ್ ಕಲೆಕ್ಟರಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ 3 ನೇ ಪ್ರತಿವಾದಿ ಜಗದೀಶ್ ರವರು ಎಷ್ಟು ವರ್ಷಗಳಿಂದ ಪರಿಚಯ ಇದೆ ಎಂದರೆ ಸಾಕ್ಷಿ ಇತ್ತೀಚೆಗೆ ಸುಮಾರು 10 ವರ್ಷಗಳಿಂದ ಪರಿಚಯ ಇದೆ. ಸಾಕ್ಷಿ ಮುಂದುವರೆದು ಅವರಿಗಿಂತ ಅವರ ತಂದೆ ಕಲ್ಲೇಶಪ್ಪರವರ ಪರಿಚಯ ನನಗೆ ಹೆಚ್ಚಾಗಿದೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ವಿಚಾರಗಳನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿ ಕಲ್ಲೇಶಪ್ಪರವರು ಎಂದು ನುಡಿಯುತ್ತಾರೆ. ಅದರಲ್ಲಿ ಏನು ಬರೆದಿದೆ ಎಂಬ ವಿಚಾರ ಗೊತ್ತಿದೆಯಾರ ಎಂದರೆ ಸಾಕ್ಷಿ ಗೊತ್ತು ಅದರಲ್ಲಿ ಕಲ್ಲೇಶಪ್ಪರವರು ವಿಲ್ ಮಾಡಿರುವ ಬಗ್ಗೆ ಇದೆ ಎಂದು ನುಡಿಯುತ್ತಾರೆ. ನಿಡಿ-1 ರ ವಿಲ್ ನಾಮೆಯನ್ನು ನಾನು ಓದಿರುತ್ತೇನಾ ಎಂದರೆ ಸಾಕ್ಷಿ ಹೌದು ವಕೀಲರ ಓದಿದ ಮೇಲೆ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ವಕೀಲರು ಯಾರು ಎಂದರೆ ಸಾಕ್ಷಿ ಲೋಕೇಶ್ ಎಂದು ನುಡಿಯುತ್ತಾರೆ. ಕಲ್ಲೇಶಪ್ಪರವರು ನನಗೆ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿ ಸುಮಾರು 25 ವರ್ಷಗಳಿಂದ ಎಂದು ನುಡಿಯುತ್ತಾರೆ. ಅವರು ಯಾರ ಮೂಖಾಂತರ

ಪರಿಚಯ ಎಂದರೆ ಸಾಕ್ಷಿ ಅವರು ಕೆರೆ ಮೀನಿನ ಕಂಟ್ರಾಕ್ಟ ವಿಚಾರವಾಗಿ ಹಿರೇನಲ್ಲೂರಿಗೆ ಬರುತ್ತಿದ್ದರು ಆಗಾಗಿ ಅವರ ಪರಿಚಯ ನನಗೆ ಇತ್ತು ಎಂದು ನುಡಿಯುತ್ತಾರೆ. ಕಲ್ಲೇಶಪ್ಪರವರು ಸಹಿ ಮಾಡಿರುವ ಬೇರೆ ಯಾವುದಾದರೂ ದಾಖಲೆಯನ್ನು ನಾನು ನೋಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ನಿಡಿ-1ರ ವಿಲ್ ನಾಮೆಯಲ್ಲಿರುವ ಸಹಿ ಕಲ್ಲೇಶಪ್ಪರವರ ಸಹಿ ಅಲ್ಲ ಎಂದರೆ ಸಾಕ್ಷಿ ಸದರಿ ಸಹಿ ಕಲ್ಲೇಶಪ್ಪರವರದ್ದೆ ಎಂದು ನುಡಿಯುತ್ತಾರೆ. ನಿಡಿ-1ರ ದಾಖಲೆಯನ್ನು ಪ್ರಸ್ತುತ ದಾವೆಯನ್ನು ಸಲ್ಲಿಸಿದ ನಂತರ ಸೃಷ್ಟಿಸಲಾಗಿದೆ ಎಂದರೆ ಸುಳ್ಳು. ನಾನು, ತಿಮ್ಮಣ್ಣ, ಮುಜೀಬ್ ಮತ್ತು ಮಂಜುನಾಥ ಎಂಬುವವರು ವಿಲ್ ನಾಮೆ ಆಗುವ ಸಮಯದಲ್ಲಿ ಹಾಜರಿದ್ದೇವು. ಎಲ್ಲಾರೂ ಒಟ್ಟಿಗೆ ಬಂದಿದ್ದ ಎಂದರೆ ಸಾಕ್ಷಿ ಇಲ್ಲ ಕಲ್ಲೇಶಪ್ಪರವರು ಮೊದಲೇ ಬಂದಿದ್ದರು, ಆನಂತರ ನಾನು ಬಂದೆ ಎಂದು ನುಡಿಯುತ್ತಾರೆ. ನಾನು ಬರುವ ಪೂರ್ವದಲ್ಲಿ ನಿಡಿ-1ರ ವಿಲ್ ನಾಮೆಯ ಬರವಣಿಗೆ ಮಾಡಲಾಗಿತ್ತು ಎಂದರೆ ಸರಿ. ನಾನು ಬಂದಾಗ ಸಂಜೆ 5-00 ಗಂಟೆ ಆಗಿತ್ತು. ನಿಡಿ-1ರ ವಿಲ್ ನಾಮೆಗೆ ನಾನು ಸಹಿ ಹಾಕುವ ಮೊದಲೇ ಬೇರೆಯವರು ಸಹಿ ಮಾಡಿದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಡಿ-1ರ ವಿಲ್ ನಾಮೆಯಲ್ಲಿ ಕಲ್ಲೇಶಪ್ಪರವರ ಹೆಬ್ಬೆಟ್ಟಿನ ಗುರುತು ಇದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಕಲ್ಲೇಶಪ್ಪರವರ ಹೆಬ್ಬೆಟ್ಟಿನ ಗುರುತನ್ನು ನಿಡಿ-1ರ ದಾಖಲೆಗೆ

ಪಡೆಯಲು ಪ್ರಯತ್ನ ಪಟ್ಟಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಮರೆತಿದೆ ಎಂದು ನುಡಿಯುತ್ತಾರೆ. ನಾನು ಈ ಹಿಂದೆ ಕಲ್ಲೇಶಪ್ಪರವರ ಪರವಾಗಿ ಸಾಕ್ಷ್ಯ ನುಡಿದಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಕಲ್ಲೇಶಪ್ಪರವರು ಉಪನೊಂದಣಿ ಕಚೇರಿಗೆ ಕರೆದು ಸಾಕ್ಷಿಯಾಗಿ ಸಹಿ ಮಾಡಿಸಿರುತ್ತಾರಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಿಡಿ-1ರ ದಾಖಲೆಯನ್ನು ನಾನು ಖುದ್ದಾಗಿ ಓದಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವಕೀಲರ ಓದಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-1ರ ವಿಲ್ ನಾಮೆ ಬರೆಯುವ ಪೂರ್ವದಲ್ಲಿ ಕಲ್ಲೇಶಪ್ಪರವರು ಸದರಿ ವಿಲ್ ನಾಮೆ ಬರೆಯುವ ವಿಚಾರವಾಗಿ ನನ್ನ ಬಳಿ ವಿಶ್ವಾಸದಿಂದ ಮಾತುಕತೆ ಮಾಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಕಲ್ಲೇಶಪ್ಪರವರ ಆರೋಗ್ಯ ಪರಿಸ್ಥಿತಿ ಚೆನ್ನಾಗಿರಲಿಲ್ಲ ಮತ್ತು ಅವರ ಯಾವುದೇ ದಾಖಲೆಗೆ ಸಹಿ ಮಾಡಲು ಸಮರ್ಥರಾಗಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಡಿ-1ರ ವಿಲ್ ನಾಮೆ ಬರೆದು ಎಷ್ಟು ವರ್ಷಗಳಾಗಿವೆ ಎಂದರೆ ಸಾಕ್ಷಿ ಸುಮಾರು 20 ವರ್ಷಗಳಾಗಿವೆ ಎಂದು ನುಡಿಯುತ್ತಾರೆ. ದಿನಾಂಕ ನೆನಪಿದೆಯಾ ಎಂದರೆ ಸಾಕ್ಷಿ ದಿನಾಂಕ 12/12/2006 ಇರಬಹುದು ಎಂದು ನುಡಿಯುತ್ತಾರೆ. ನಿಡಿ-1ರ ವಿಲ್ ನಾಮೆ ಬರವಣಿಗೆಯಾದ ನಂತರ ಯಾರ ಬಳಿ ಇತ್ತು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪತ್ರವನ್ನು ಕಲ್ಲೇಶಪ್ಪರವರು ತೆಗೆದುಕೊಂಡು ಹೋಗಿದ್ದರಾ ಎಂದರೆ

ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಲ್ಲೇಶಪ್ಪರವರು ಮರಣ ಹೊಂದಿದ ನಂತರ ಸದರಿ ವಿಲ್ ನಾಮೆ ಯಾರ ಬಳಿ ಇತ್ತು ಎಂದು ಗೊತ್ತಾಯಿತಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಕಲ್ಲೇಶಪ್ಪರವರು ನಿಡಿ-1 ರಂತೆ ಯಾವುದೇ ವಿಲ್ ನಾಮೆಯನ್ನು ಮಾಡದೇ ಇದ್ದರೂ ಸಹ ನಾನು 3 ನೇ ಪ್ರತಿವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ವಕೀಲರಾಗಿದ್ದು ನಾನು ಅವರ ಜತೆ ವಿಶ್ವಾಸದಿಂದ ಇರುವುದರಿಂದಲೇ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.